ಸ್ಪಷ್ಟವಾಗಿ ಗೊತ್ತಿದೆ. ಕರ್ನಾಟಕ ರಾಜ್ಯದ ರೈತರು ಇದನ್ನು ಅರ್ಥ ಮಾಡಿಕೊಂಡಿದ್ದಾರೆ ಎಂಬ ಭಾರವಸೆಯನ್ನು ಸ್ಪಷ್ಟವಾಗಿ ಸರ್ಕಾರದಲ್ಲಿ ನಾನು ಇಟ್ಟುಕೊಂಡಿದ್ದೇನೆ.

ಅಧ್ಯಕ್ಷರು : ಶ್ರೀ ಏಕಾಂತಯ್ಯ...

ಶ್ರೀ ವಾಟಾಳ್ ನಾಗರಾಜ್ : ಬಡ್ಡಿ ಬಗ್ಗೆ ಸ್ಪಷ್ಟವಾಗಿ ಹೇಳಬೇಕು.
(ಗೊಂದಲ)

MR. SPEAKER : Nothing shall go on record. Sri Ekanthaiah...

ನಿಯಮ 159ರ ಮೇರೆಗೆ ಪ್ರಸ್ತಾವ

ಶ್ರೀ ಎಚ್. ಏಕಾಂತಯ್ಯ : (ಚಿತ್ರದುರ್ಗ) ಸನ್ಮಾನ್ಯ ಸಭಾಧ್ಯಕ್ಷರೆ, ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 159ರ ಪ್ರಕಾರ ಈ ಕೆಳಗೆ ನಮೂದಿಸಿರುವ ಪ್ರಸ್ತಾವನೆಯನ್ನು ಪ್ರಸ್ತಾಪಿಸಲು ತಮ್ಮ ಅನುಮತಿಯನ್ನು ನೀಡಬೇಕೆಂದು ನಾನು ವಿನಂತಿಸುತ್ತೇನೆ. ನನ್ನ ಪ್ರಸ್ತಾವನೆ ಈ ರೀತಿ ಇದೆ :

" ದೆಹಲಿ ವಿಶೇಷ ಪೋಲೀಸ್ ಸಿಬ್ಬಂದಿ ಕಾಯಿದೆಯ 6ನೇ ವಿಧಿಯ ಅನ್ವಯ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಭ್ರಷ್ಟಾಚಾರ ನಿರೋಧ ಕಾಯಿಗೆ ವ್ಯಾಪ್ತಿಯಲ್ಲಿ ಬರುವ ಅಪರಾಧಗಳನ್ನು ತನಿಖೆ ಮಾಡಲು ಈ ಹಿಂದೆ ರಾಜ್ಯ ಸರ್ಕಾರವು ನೀಡಿದ್ದ ಸಮ್ಮತಿಯನ್ನು ತಾರೀಖು 27-7-1991 ರಂದು ಹಿಂತೆಗೆದುಕೊಂಡಿರುವುದನ್ನು ಈ ಸದನವು ಅಸಮ್ಮತಿಸುತ್ತದೆ. ಮತ್ತು ಸದರಿ ಅಪರಾಧಗಳಿಗೆ ಸಂಬಂಧಪಟ್ಟಂತೆ ತನಿಖೆ ಮಾಡಲು ಅವಶ್ಯವಾದ ಸಮ್ಮತಿ ನೀಡುವಂತೆ ರಾಜ್ಯ ಸರ್ಕಾರವನ್ನು ಈ ಸದನವು ಒತ್ತಾಯಿಸುತ್ತದೆ...

ಸನ್ಮಾನ್ಯ ಅಧ್ಯಕ್ಷರೆ, ನಾನು ಈ ಪ್ರಸ್ತಾವನೆಯನ್ನು ಮಂಡಿಸುವುದಕ್ಕೆ ತಾವು ಅನುಮತಿಯನ್ನು ಕೊಟ್ಟಿದ್ದಕೋಸ್ಕರ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಮೊಟ್ಟ ಮೊದಲನೆಯದಾಗಿ ತಾರೀಖು 27-7-91ರಂದು ರಾಜ್ಯ ಸರ್ಕಾರ ದೆಹಲಿ ಸ್ಪೆಷಲ್ ಪೋಲೀಸ್ ಎಸ್ಟಾಬ್ಲಿಷ್‌ಮೆಂಟ್ ಕಾನೂನಿನ ಪ್ರಕಾರ ಸಮ್ಮತಿಯನ್ನು ಹಿಂತೆಗೆದುಕೊಂಡಿರುವ ಸರ್ಕಾರಿ ಆದೇಶವನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ....

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಸರ್ಕಾರ ಕೂಡ ಒಪ್ಪಿದೆ.

ಅಧ್ಯಕ್ಷರು : ಈಗ ಮುಂದಿನ ವಿಷಯಕ್ಕೆ ನಾನು ಹೋಗಿದ್ದೇನೆ. ಸಾಕಷ್ಟು ಕಾಲವನ್ನು ತಮಗೆ ಕೊಟ್ಟಿದ್ದೇನೆ. ದಯವಿಟ್ಟು ತಾವು ಸಹಕರಿಸಿ.

ಶ್ರೀ ವಾಟಾಳ್ ನಾಗರಾಜ್ : ಬಡ್ಡಿ ಸುಸ್ತಿ ಬಡ್ಡಿ ಬಗ್ಗೆ ಸರ್ಕಾರದ ನೀತಿಯನ್ನು ನಾನು ವಿರೋಧಿಸುತ್ತೇನೆ. ನಾನೂ ಸಹ ಸಭೆಯಿಂದ ಹೊರಗೆ ಹೋಗುತ್ತೇವೆ.

ಅಧ್ಯಕ್ಷರು : ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದಾರೆ.
(ಶ್ರೀ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

ಶ್ರೀ ಸಿ. ಬೈರೇಗೌಡ : ಅದರ ಬಗ್ಗೆ ಚರ್ಚೆಯಾಗಿದೆ ಅಧ್ಯಕ್ಷರೆ ಸರ್ಕಾರ ಅದಕ್ಕೆ ವಿರೋಧ ಏನು ಇಲ್ಲ, ಆದರೆ ಇವತ್ತಿನ ದಿವಸ ತಕ್ಷಣ ಜಾರಿಗೆ ತರುತ್ತೇವೆಂದು ಒಂದು ಮಾತನ್ನು ಹೇಳಬೇಕಾಗಿದೆ. ಸರ್ಕಾರ ಒಪ್ಪಿರತಕ್ಕ ಈ ನೀತಿಯನ್ನು ಜಾರಿಗೆ ತರುತ್ತೇವೆಂದು ಹೇಳಿದರೆ ಆಯಿತು. ನಾನು ವರ್ಕಬಲ್ ಪ್ರಪೋಸೀಷನ್ ಹೇಳುತ್ತಿದ್ದೇನೆ. ಗ್ಲಿಸರಿನ್ ಕಣ್ಣೀರನ್ನು ರೈತರ ವಿಚಾರದಲ್ಲಿ ಸುರಿಸುಲು